ಇಂದು ದಿಃ**24-06-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ.ಸಿ.ಡಿ ವಕೀಲರಿಂದ 3 ಮತ್ತು 7 ನೇ ಪ್ರತಿವಾದಿಗಳ ಪರಃ**

ಈ ದಾವೆಯನ್ನು ನಾನು ನನ್ನ ತಂದೆ ತಾಯಿ, ಸಹೋದರ ಮತ್ತು ಸಹೋದರಿಯರ ವಿರುದ್ದ ಮಾಡಿದ್ದರು, ನನ್ನ ತಂದೆ ತೀರಿಕೊಂಡಿದ್ದಾರೆ. ಯಾವ ಯಾವ ಸರ್ವೆ ನಂಬರ್ ಗಳ ಬಗ್ಗೆ ಮತ್ತು ಅವುಗಳ ಕ್ಷೇತ್ರ ಹಾಗೂ ಯಾವ ಊರಿನಲ್ಲಿ ಇವೆ ಎಂದು ನನಗೆ ಮಾಹಿತಿ ಇಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಷಯಗಳ ಮಾಹಿತಿ ಇಲ್ಲ. ನಮ್ಮ ಮನೆತನದ ಮೂಲ ಪುರುಷ ಮಲ್ಲಪ್ಪ ಎಂದರೆ ಸರಿ. ಸಾಕ್ಷಿ ನನ್ನ ತಂದೆಯ ತಂದೆ ಮಲ್ಲಪ್ಪ ಎಂದು ಹೇಳುತ್ತಾರೆ. ನನ್ನಅಜ್ಜನಿಗೆ ಭರಮಪ್ಪ, ನೀಲಪ್ಪ ಮತ್ತು ನಿಂಗಪ್ಪ ಎಂಬ ಮಕ್ಕಳು ಎಂದರೆ ಸರಿ. ಮಲ್ಲಪ್ಪನ ಮಗ ನಿಂಗಪ್ಪ ಬೇರೆ ಮನೆತನಕ್ಕೆ ದತ್ತಕ ಹೋಗಿದ್ದನು ಎಂದರೆ ಸರಿ. ಮಲ್ಲಪ್ಪನಿಂದ ಬಂದ ಆಸ್ತಿಗಳನ್ನು ನನ್ನ ತಂದೆ ಮತ್ತು ನೀಲಪ್ಪ ಹಿಸ್ಸೆ ಮಾಡಿಕೊಂಡರು ಎಂದರೆ ಸರಿ. ಆ ಹಿಸ್ಸೆಯ ಪ್ರಕಾರ ಶೆಡ್ಯೂಲ್ ಎ ಯ ಐಟಂ ನಂಬರ್ 1 ರಿಂದ 3 ರಾಜನಹಳ್ಳಿಯ ಜಮೀನುಗಳು ನನ್ನ ತಂದೆಯ ಹಿಸ್ಸೆಗೆ ಬಂದವು ಎಂದರೆ ಸರಿ. ಈ ಶೆಡ್ಯೂಲ್ ಎ ಯ ಐಟಂ ನಂಬರ್ 1 ರಿಂದ 3 ಆಸ್ತಿಗಳು ಮಾತ್ರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ.

ದಿನಾಂಕಃ11-04-1999 ರಂದು, ನಾನು 3, 4 ಮತ್ತು 6 ನೇ ಪ್ರತಿವಾದಿ ಸೇರಿ ಈ ಮೂರು ಜಮೀನುಗಳಲ್ಲಿ ಹಿಸ್ಸೆ ಮಾಡಿಕೊಂಡೆವು ಎಂದರೆ ಸರಿಯಲ್ಲ. ದಿನಾಂಕಃ11-04-1999 ರಂದು ಹಿಸ್ಸೆ ಮಾಡಿಕೊಂಡಿದ್ದರೂ, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಸ್ಸೆಯ ಪ್ರಕಾರ ಇಲ್ಲಿಯವರೆಗೂ ನಮ್ಮ ನಮ್ಮ ಹಿಸ್ಸೆಗಳ ಪ್ರತ್ಯೇಕ ಅನುಭವದಲ್ಲಿ ಇದ್ದೇವೆ ಎಂದರೆ ಸರಿಯಲ್ಲ.

ನಾವೆಲ್ಲರೂ ಪ್ರತ್ಯೇಕವಾಗಿ ವಾಸ ಇದ್ದೇವೆ ಎಂದರೆ ಸರಿ. ಸಾಕ್ಷಿ ಇತ್ತೀಚೆಗೆ ಬೇರೆ ವಾಸ ಇದ್ದೇವೆ ಆದರೆ ಪಾಲು ಆಗಿಲ್ಲ ಎಂದು ಹೇಳುತ್ತಾರೆ. ನಾವೆಲ್ಲರೂ ಮೊದಲು ಕೂಡಿ ಇದ್ದ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

ಶೆಡ್ಯೂಲ್ ಬಿ ಯ ಐಟಂ ನಂಬರ್ 1 ಆಸ್ತಿಯನ್ನು ನನ್ನ ತಂದೆ ದಿನಾಂಕ:11-07-1989 ರಂದು ರೂ.1 ಸಾವಿರಕ್ಕೆ ಹಾಲಪ್ಪ ಬಣಕಾರ್ ಇವರಿಂದ ಖರೀದಿ ಮಾಡಿದರು ಎಂದರೆ ಸರಿಯಲ್ಲ. ಸಾಕ್ಷಿಗೆ ಒಟ್ಟಿಗೆ ಖರೀದಿಸಿದ್ದು ಎಂದು ಹೇಳುತ್ತಾರೆ. ಒಟ್ಟು ಕುಟುಂಬದಿಂದ ಖರೀದಿ ಮಾಡಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮಾತ್ರ ಖರೀದಿಸಿದ್ದು ಎಂದರೆ ಸರಿಯಲ್ಲ. ಈ ಮನೆಯ ಆಸ್ತಿಯನ್ನು ನನ್ನ ತಂದೆ ಖರೀದಿಸಿದ ಕಾರಣ, ಇದು ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನಮಗೆ ಯಾರಿಗೂ ಇದರಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಿನಾಂಕ:22-09-2017 ರಂದು ನನ್ನ ತಂದೆ ಈ ಮನೆಯನ್ನು 2 ನೇ ಪ್ರತಿವಾದಿಗೆ ದಾನಪತ್ರದ ಮುಖಾಂತರ ಕೊಟ್ಟರು ಎಂದರೆ ಸರಿ, ಸಾಕ್ಷಿ ನಾವು ಸಹ ಇರುತ್ತೇವೆ ಎಂದು ಹೇಳುತ್ತಾರೆ. ನೊಂದಾಯಿತ ದಾನಪತ್ರ ಆಗಿದೆ ಎಂದರೆ ಗೊತ್ತಿಲ್ಲ. ಸಾಕ್ಷಿ ದಾನಪತ್ರ ಮಾಡಿಕೊಂಡಿರುವುದು ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಇದ್ದ ಕಾರಣ, ಆತ 2 ನೇ ಪ್ರತಿವಾದಿಗೆ ದಾನಪತ್ರ ಮಾಡಿಕೊಟ್ಟಿದ್ದಾನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ 1997 ರಿಂದ ಇಲ್ಲಿಯವರೆಗೂ ಪೋಲೀಸ್ ಇಲಾಖೆಯಲ್ಲಿ ನೌಕರಿ ಮಾಡುತ್ತಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ನೌಕರಿಯಲ್ಲಿ ಇದ್ದ ಕಾರಣ, ದಿನಾಂಕ:03-08-2018 ರಂದು ಎಸ್.ಬಿ.ಐ ಕುಮಾರ ಪಟ್ಟಣಂ ಶಾಖೆಯಲ್ಲಿ ರೂ.6 ಲಕ್ಷ ಸಾಲ ಸಹ ಪಡೆದಿದ್ದರು ಎಂದರೆ ಸರಿಯಲ್ಲ. ದಿನಾಂಕ:13-08-2018 ರಂದು 3 ನೇ ಪ್ರತಿವಾದಿ, ಶೆಡ್ಯೂಲ್ ಬಿ ಯ ಐಟಂ

ನಂಬರ್ 2 ಮನೆಯ ಆಸ್ತಿಯನ್ನು, ತನ್ನ ಸಂಬಳದ ಉಳಿತಾಯದಿಂದ ಮತ್ತು ಬ್ಯಾಂಕ್ ಸಾಲ ಪಡೆದು ಖರೀದಿ ಮಾಡಿದರು ಎಂದರೆ ಸರಿಯಲ್ಲ. ನೊಂದಾಯಿತ ಕ್ರಯಪತ್ರದ ಅಡಿ ಖರೀದಿ ಮಾಡಿದರು ಎಂದರೆ ಸರಿಯಲ್ಲ.

ದಿನಾಂಕಃ25-08-2004 ರಂದು 3 ನೇ ಪ್ರತಿವಾದಿ ತನ್ನ ಸಂಬಳದ ಉಳಿತಾಯದಿಂದ ಶೆಡ್ಯೂಲ್ ಬಿ ಯ ಐಟಂ ನಂಬರ್ 3 ಆಸ್ತಿಯನ್ನು ಖರೀದಿ ಮಾಡಿದರು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಎಲ್.ಐ.ಸಿ ಪಾಲಿಸಿ ನಂಬರ್ 622770904 ಈ ಪಾಲಿಸಿ ಅಡಿ ರೂ.71,567/- ರೂಗಳನ್ನು ಸಾಲ ಪಡೆದಿದ್ದನು ಎಂದರೆ ಸರಿಯಲ್ಲ. ಇನ್ನೊಂದು ಪಾಲಿಸಿ ನಂಬರ್ 629832562 ಅಡಿ ರೂ.33,221/- ರೂಗಳನ್ನು ಸಾಲ ಪಡೆದಿದ್ದನು ಎಂದರೆ ಸರಿಯಲ್ಲ. ಅದೇ ರೀತಿ ಪಾಲಿಸಿ ನಂಬರ್ 622690282 ರ ಅಡಿ ರೂ.21,613/- ರೂಗಳ ಸಾಲ ಪಡೆದಿದ್ದನು ಎಂದರೆ ಸರಿಯಲ್ಲ. ಅದೇ ರೀತಿ ಪಾಲಿಸಿ ನಂಬರ್ 1451051, 1728022, 2260101, 2561737 ಇವುಗಳ ಅಡಿ ದಿನಾಂಕಃ21-03-2003 ರಲ್ಲಿ ರೂ.3,300, ದಿನಾಂಕಃ06-03-2006 ರೂ.19,500, ದಿನಾಂಕಃ14-11-2008 ರಲ್ಲಿ ರೂ.36,000, ದಿನಾಂಕಃ17-08-2012 ರಲ್ಲಿ ರೂ.78,000, ದಿನಾಂಕಃ16-03-2016 ರಲ್ಲಿ ರೂ.1,50,000, ದಿನಾಂಕಃ27-02-2019 ರಲ್ಲಿ ರೂ.2,46,000 ಸಾಲವನ್ನು ಪಡೆದಿದ್ದರು ಎಂದರೆ ಸರಿಯಲ್ಲ. ಈ ಹಣದಿಂದ 3 ನೇ ಪ್ರತಿವಾದಿ ತನ್ನ ಹೆಂಡತಿ 7 ನೇ ಪ್ರತಿವಾದಿಯ ಹೆಸರಿನಲ್ಲಿ ಶೆಡ್ಯೂಲ್ ಎ ಯ ಐಟಂ ನಂಬರ್ 4 ಜಮೀನನ್ನು ದಿನಾಂಕಃ25-10-2016 ರಂದು ಖರೀದಿ ಹಿಡಿದರು ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ತಾನು ಖರೀದಿ ಮಾಡಿದ ಶೆಡ್ಯೂಲ್ ಬಿ ಯ ಐಟಂ ನಬಂರ್

2 ಮತ್ತು 3 ಆಸ್ತಿಗಳ ಕಬ್ಜ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ 7 ನೇ ಪ್ರತಿವಾದಿ ಖರೀದಿ ಹಿಡಿದ್ದಾಗಿನಿಂದ ಶೆಡ್ಯೂಲ್ ಎ ಯ ಐಟಂ ನಂಬರ್ 4 ಆಸ್ತಿಯ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಶೆಡ್ಯೂಲ್ ಎ ಯ ಐಟಂ ನಂಬರ್ 4 ಮತ್ತು ಶೆಡ್ಯೂಲ್ ಎ ಯ ಐಟಂ ನಂಬರ್ 1 ರಿಂದ 3 ಆಸ್ತಿಗಳು ಪ್ರತಿವಾದಿ 3 ಮತ್ತು 7 ಇವರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಈ ಆಸ್ತಿಗಳು ಪ್ರತಿವಾದಿ 3 ಮತ್ತು 7 ಇವರಿಗೆ ಸಂಬಂಧಿಸಿದ್ದು ಎಂದು ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿಗಳು 3 ಮತ್ತು 7 ನೇ ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಗಳು ಇರುವ ಕಾರಣ, ನನಗೆ ಹಿಸ್ಸೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ದಾವಾ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ.

ರಾಜನಹಳ್ಳಿ ಗ್ರಾಮದ ಸರ್ವೆ ನಂಬರ್ 51/2 ಕ್ಷೇತ್ರ 1 ಗುಂಟೆ 4 ಆಣೆ ಇದು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನ್ನ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಸದರಿ ಮನೆಯನ್ನು ಸೇರಿಸಿಲ್ಲ. ಸಾಕ್ಷಿ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಏಕೆ ಈ ದಾವೆಯಲ್ಲಿ ಈ ಆಸ್ತಿಯನ್ನು ಸೇರಿಸಿಲ್ಲ ಎಂದರೆ ಸಾಕ್ಷಿ ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳು ಇಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯರು ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜನಹಳ್ಳಿ ಗ್ರಾಮದ ಪಂಚಾಯಿತಿ ಆಸ್ತಿ ನಂಬರ್ 351 ಇದು ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ಜಮೀನಿನಲ್ಲಿ ಇರುವ ಕಾರಣ ಈ ಮನೆಯನ್ನು ಸಹ ನಾನು ಈ ದಾವೆಯಲ್ಲಿ ತೋರಿಸಿಲ್ಲ. ಈ ಎರಡೂ ಆಸ್ತಿಗಳು ನನ್ನ ಹೆಸರಿನಲ್ಲಿ ಇರುವ ಕಾರಣ, ಉದ್ದೇಶ ಪೂರ್ವಕವಾಗಿ ನಾನು ಈ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 3

ಮತ್ತು 7 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರು ಸ್ವಂತ ಸಂಪಾದನೆ ಮಾಡಿದ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಅನಾವಶ್ಯಕ ಆಸ್ತಿಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವ ಕಾರಣ, ನನ್ನ ದಾವೆ ವಜಾ ಆಗಲು ಯೋಗ್ಯ ಎಂದರೆ ಸರಿಯಲ್ಲ. ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2,8, 4 ರಿಂದ 6 ನೇ ಪ್ರತಿವಾದಿಯ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.